ಸಾಹೇಬರೆ ಮುಂದಿನದನ್ನು ನಾನೇನೂ ಹೇಳುವುದಿಲ್ಲ. ಯಾವುದೋ ಕೆಲಸಕ್ಕೆಂದು ಅನ್ನಾವರಂಗೆ ಹೋಗಿದ್ದ ಯದುನಂದನ ಹಿಂತಿರುಗಿ ಮನೆಗೆ ಬಂದು ವಿಷಯ ತಿಳಿದಾಗ ಕುಸಿದು ಹೋಗಿದ್ದಾನೆ. ಎಷ್ಟಾದರಾಗಲಿ ಬಿಸಿ ರಕ್ತ ಅಲ್ಲವಾ ಸಾಹೇಬರೆ. ಬೆಳಿಗ್ಗೆ ಬಂದು ಎಸ್ಪಿಯವರ ಕೊರಳು ಪಟ್ಟಿ ಹಿಡಿದಿದ್ದಾನೆ. ಮುಂದಿನದ್ದೆಲ್ಲ ನಿಮಗೇ ಗೊತ್ತಲ್ಲ ಸಾಹೇಬರೆ...'

'ಗದ್ದರ್' ಕಿರುಚಿದ್ದರು ಪೆದ್ದಿಂಟಿ ರಂಗರಾವ್.

'ಹೌದು ಸಾಹೇಬರೆ, ನಾನು ಹೇಳುತ್ತಿರುವುದು ಖಂಡಿತಾ ನಿಜ. ಕಾಡಂಚಿನ ಊರುಗಳಲ್ಲಿ ಇಂಥ ಘಟನೆಗಳು ಸರ್ವೇಸಾಮಾನ್ಯ. ನಿಮ್ಮ ಕೈ ಕತ್ತರಿಸಿದ ನಂತರ ಯದುನಂದನ ಕಡೆಗೆ ಊರು ಬಿಟ್ಟು ಕಾಡಿನಲ್ಲಿ ನಕ್ಸಲರೊಂದಿಗೆ ಸೇರಿಬಿಟ್ಟ. ಕೊಂಡಪಲ್ಲಿ ಸೀತಾರಾಮಯ್ಯನವರ ಮಾವೋಯಿಸ್ಟ್ ಗುಂಪಿನಲ್ಲಿ ಕೆಲಸ ಮಾಡುತ್ತಿರುವನಂತೆ. ಆದರೆ ನಿಮ್ಮ ಕೈ ಕತ್ತರಿಸಿದಕ್ಕೆ ಪಶ್ಚಾತ್ತಾಪ ಪಟ್ಟನಂತೆ. ಏನು ಮಾಡುವುದು ಸಾಹೇಬರೆ, ಬಡವರ ಕೂಗು ಭಗವಂತನಿಗೂ ಕೇಳುವುದಿಲ್ಲ. ಭೂಮಿತಾಯಿ, ಗಾಳಿ, ನೀರು, ಬೆಳಕು, ಖನಿಜ ಹೀಗೆ ಎಲ್ಲಾ ತನ್ನ ಸಕಲ ಸಂಪತ್ತನ್ನು ಇಡೀ ಜೀವಜಗತ್ತಿಗೆ ಉಚಿತವಾಗಿ ಕೊಟ್ಟಿದೆ. ಆದರೆ ಕೆಲವು ಬಲಾಢ್ಯರು ಮಾತ್ರವೇ ಅದನ್ನು ತಮ್ಮ ಅಧೀನದಲ್ಲಿ, ಹತೋಟಿಯಲ್ಲಿ ಇಟ್ಟುಕೊಂಡಿದ್ದಾರೆ. ಅಸಮಾನತೆ ಈ ಭೂಮಿಯ ಮೇಲೆ ಇರುವವರೆಗೂ ಸಂಘರ್ಷಗಳು ತಪ್ಪಿದ್ದಲ್ಲ ಸಾಹೇಬರೆ. ಯದುನಂದನನ ಹುಡುಗಿ ಧೈರ್ಯಗೆಡದೆ ತನ್ನ ಅತ್ತೆ-ಮಾವಂದಿರನ್ನು ಕಷ್ಟಪಟ್ಟು ಸಾಕುತ್ತಿದ್ದಾಳೆ. ನೀವು ಈ ಕಡೆ ಬಂದ ಮೇಲೆ ವೈ.ಎಸ್. ರೆಡ್ಡಿ ಪೆದ್ದಚೆರುವುಗೆ ಹೋಗಿ ದೌರ್ಜನ್ಯ ನಡೆಸಲು ಪ್ರಯತ್ನಿಸಿದರಂತೆ. ಆದರೆ ಹೂಮನ್ ರೈಟ್ಸ್ ಕಮಿಷನ್ ಪೆದ್ದಚೆರುವುಗೆ ಬಂದು ವಿಚಾರಣೆ ನಡೆಸಿ ಎಸ್ಪಿ ರೆಡ್ಡಿಯವರಿಗೆ ಛೀಮಾರಿ ಹಾಕಿಸಿ ಅವರನ್ನು ಹೈದರಾಬಾದ್‌ಗೆ ವರ್ಗಾವಣೆ ಮಾಡಿಸುವಲ್ಲಿ ಸಫಲವಾಯಿತು. ಈಗ ಯಾವ ಪೊಲೀಸರೂ ಪೆದ್ದಚೆರುವುಗೆ ಕಾಲಿಡುವುದಿಲ್ಲ. ಇದೇ ಸಾಹೇಬರೆ ಪ್ರಭುತ್ವವೇ ಪ್ರಜೆಗಳನ್ನು ಅಪರಾಧಿಗಳನ್ನು ಮಾಡುವುದೆಂದರೆ... ನಿಮಗೆ ವಾಸ್ತವ ಸಂಗತಿ ತಿಳಿಯಲೆಂದೇ ಇಂದು ಗುಟ್ಟಾಗಿ ನಿಮ್ಮ ಬಳಿ ಬಂದದ್ದು' ಎಂದು ಹೇಳಿ ರಂಗರಾವ್‌ಗೆ ಕೈ ಮುಗಿದು ಗದ್ದರ್ ಕತ್ತಲೆಯಲ್ಲಿ ಮರೆಯಾಗಿದ್ದರು.

ಮಧ್ಯರಾತ್ರಿ ಒಂದು ಗಂಟೆಯ ಗೋದಾವರಿ ಎಕ್ಸ್‌ಪ್ರೆಸ್ ರೈಲಿನ ಕೂಗಿನಿಂದ ರಂಗರಾವ್ ನೆನಪುಗಳಿಂದ ಕಳಚಿಕೊಂಡು ವಾಸ್ತವಕ್ಕೆ ಬಂದಿದ್ದರು. ಆ ನಂತರ ಗದ್ದರ್ ಭೇಟಿಯಾಗಲಿಲ್ಲ. ಆದರೆ ರಂಗರಾವ್ ಮಾತ್ರ ತಮ್ಮ ವೃತ್ತಿಯಲ್ಲಿ ಅದೇ ಪ್ರಾಮಾಣಿಕತೆಯನ್ನು, ನಿಷ್ಠೂರತೆಯನ್ನು, ಧೈರ್ಯವನ್ನು ಉಳಿಸಿಕೊಂಡು ಬಂದಿದ್ದರು. ಗದ್ದರ್ ನಿಧನದ ವಾರ್ತೆ ಇಷ್ಟೆಲ್ಲಾ ನೆನಪುಗಳು ಮರುಕಳಿಸಲು ಕಾರಣವಾಗಿತ್ತು. ಎದ್ದು ತಮ್ಮ ಕೊಠಡಿಗೆ ಮಲಗಲು ಹೋಗಿದ್ದರು. ತಮಗೆ ಅರಿವಿಲ್ಲದೆಯೇ ಟಿವಿ ಆನ್ ಮಾಡಿದ್ದರು. ಎಲ್ಲಾ ಚಾನೆಲ್‌ಗಳಲ್ಲೂ ಗದ್ದರ್ ಸಾವಿನದೇ ಸುದ್ದಿ. ಸಾಲುಗಟ್ಟಿ ಗದ್ದರ್ ಕೊನೆಯ ದರ್ಶನಕ್ಕೆ ನಿಂತ ಲಕ್ಷಾಂತರ ಜನ. ಗದ್ದರ್ ಬಗ್ಗೆ ದುಃಖ ತುಂಬಿಕೊಂಡು ಮಾತನಾಡುತ್ತಿದ್ದ ಒಡನಾಡಿಗಳು, ಸಂಘಟನೆಗಳ ನಾಯಕರು, ರಾಜಕಾರಣಿಗಳು, ಅಭಿಮಾನಿಗಳು. ಆಂಧ್ರಪ್ರದೇಶದಿಂದಲೇ ಅಲ್ಲದೆ ದೇಶದ ಮೂಲೆ ಮೂಲೆಗಳಿಂದ ಗದ್ದರ್ ದರ್ಶನಕ್ಕೆ ಹರಿದು ಬರುತ್ತಿದ್ದ ಜನಸಾಗರ! ಮೈಗಾಡ್ !! ಸರ್ಕಾರ ಗದ್ದರ್ ಮೇಲೆ ಹೇರಿದ್ದ ಸಾಮಾಜಿಕ ನಿಷೇಧವನ್ನು ತೆಗೆದಾಗ ಜನನಾಟ್ಯ ಕಲಾಮಂಡಳಿ ಮತ್ತು ಮಾವೋವಾದಿ ಪಕ್ಷ ಗದ್ದರ್‌ರವರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಾಡಿನಾದ್ಯಂತ ಆಯೋಜಿಸಿದಾಗ ಪ್ರತಿ ಕಾರ್ಯಕ್ರಮಕ್ಕೂ ಲಕ್ಷಾಂತರ ಜನ ಸೇರುವುದು ವರದಿಯಾಗುತ್ತಿತ್ತು. ಗದ್ದರ್ ಹಾಡು ಮತ್ತು ನೃತ್ಯಗಳು ಜನಸಾಮಾನ್ಯರನ್ನಲ್ಲದೆ ಭೂಮಾಲೀಕರನ್ನು, ರಾಜಕಾರಣಿಗಳನ್ನು, ಪೊಲೀಸರನ್ನು ಕೂಡಾ ಸೂಜಿಗಲ್ಲಿನಂತೆ ಆಕರ್ಷಿಸುತ್ತಿದ್ದವು. ಗದ್ದರ್ ಗೆ ಎಷ್ಟೋ ಮಂದಿ ಪೊಲೀಸ್ ಇಲಾಖೆಯಲ್ಲೂ ಅಭಿಮಾನಿಗಳು ಇರುವುದಾಗಿ ವರದಿಯೊಂದು ಬಯಲು ಮಾಡಿತ್ತು. ಗದ್ದರ್ ಶವ ದರ್ಶನಕ್ಕೆ ನುಗ್ಗುತ್ತಿದ್ದ ಜನರನ್ನು ನಿಯಂತ್ರಿಸಲು ಪೊಲೀಸರು ಹೆಣಗಾಡುತ್ತಿದ್ದರು.

ನಗು ಬಂತು ರಂಗರಾವ್‌ಗೆ 'ರಿಯಲಿ ಗದ್ದರ್ ಈಸ್ ಎ ಲೆಜೆಂಡ್. ಎ ಡೆವಿಲ್ ಅಂಡ್ ಎ ಗ್ರೇಟ್ ಹ್ಯೂಮನ್ ಬೀಯಿಂಗ್ ಆಲ್ ಅಟ್ ಎ ಟೈಮ್' ಎಂದು ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಳ್ಳುತ್ತಾ, ಟಿವಿ ಆಫ್ ಮಾಡಿ ಹಾಸಿಗೆಯ ಮೇಲುರುಳಿ ನಿದ್ದೆಗೆ ಜಾರಿದ್ದರು.